ಪಿ.ಡಬ್ಲ್ಯೂಃ 1

**ದಿನಾಂಕಃ 04-06-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಎದುರುಗಾರರ ಪರವಾಗಿ ಶ್ರೀ ಎಸ್.ಆರ್.ಎಚ್ ವಕೀಲರಿಂದಃ**

ನಮ್ಮ ತಂದೆಯವರಿಗೆ ನಾವು ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ನನ್ನ ದೊಡ್ಡ ಅಣ್ಣ ಬಸವರಾಜ ಇವರು ಮರಣ ಹೊಂದಿದ್ದು ಅವರ ಮಗ ರವಿ ಇರುತ್ತಾರೆ. ನಮ್ಮ ಸಹೋದರಿಯರ ಹೆಸರು ಶಾರದಾ ಮತ್ತು ಲಲಿತಾ. ಶಾರದಾ ಮತ್ತು ಲಲಿತಾ ಇವರು ಮರಣ ಹೊಂದಿದ್ದು ಅವರಿಗೆ ವಾರಸುದಾರರು ಇದ್ದಾರೆ. ನಮ್ಮ ತಾಯಿ ಮರಣ ಹೊಂದಿದ ನಂತರ ಇವರ್ಯಾರನ್ನು ನಾವು ವಾರಸುದಾರರನ್ನಾಗಿ ತಂದಿಲ್ಲ ಎಂದರೆ ಸರಿ. ನನ್ನ ತಾಯಿ ಮಾಡಿಕೊಟ್ಟಿದ್ದಾಳೆ ಎನ್ನಲಾದ ಮೃತ್ಯುಪತ್ರದ ಬಗ್ಗೆ ನ್ಯಾಯಾಲಯದಿಂದ ಪ್ರೊಬೇಟನ್ನು ಪಡೆದಿಲ್ಲ. ನನ್ನ ತಾಯಿ ಬರೆದುಕೊಟ್ಟಿದ್ದಾರೆ ಎನ್ನಲಾದ ಮೃತ್ಯುಪತ್ರದಾ ಆಧಾರದ ಮೇಲಿಂದ ನನ್ನ ತಾಯಿ ಮರಣ ಹೊಂದಿದ ನಂತರ, ನನ್ನ ಅಣ್ಣನ ಮಗನ ಹಾಗೂ ನನ್ನ ಸಹೋದರಿಯರ ವಾರಸುದಾರರ ವಿರುದ್ಧ ದಾವೆಯನ್ನು ದಾಖಲಿಸಿ ಡಿಕ್ರಿಯನ್ನು ಪಡೆದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಮೃತ್ಯುಪತ್ರ ಬರೆದುಕೊಟ್ಟಿದ್ದು ನನಗೆ ಗೊತ್ತಿರಲಿಲ್ಲ ಆದ್ದರಿಂದ ಡಿಕ್ರಿಯನ್ನು ಪಡೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಾಯಿ ಮರಣ ಹೊಂದಿದ ಒಂದು ವಾರದ ನಂತರ ಸದರಿ ಮೃತ್ಯುಪತ್ರದ ಬಗ್ಗೆ ನನಗೆ ಗೊತ್ತಾಯಿತು.ನನ್ನ ತಾಯಿ ಮರಣ ಹೊಂದುದ ವೇಳೆಯಲ್ಲಿ ತನ್ನ ಮೊಮ್ಮಗ ರವಿ ಇವರ ಹತ್ತಿರ ಇದ್ದಳು. ಸದರಿ ರವಿ ಇವರು ಮೃತ್ಯುಪತ್ರವನ್ನು ನನಗೆ ಕೊಟ್ಟಿರುತ್ತಾರೆ. ಈ ವಿಷಯವನ್ನು ನಮ್ಮ ವಕೀಲರಿಗೆ ಮಧ್ಯಂತರ ಅರ್ಜಿ ಸಲ್ಲಿಸುವಾಗ ಮತ್ತು ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರವನ್ನು ಬರೆಯುವಾಗ ಹೇಳಿರಲಿಲ್ಲ

ಈ ಪ್ರಕರಣದಲ್ಲಿ ನಾನು ಬಸವ್ವ ಇವರ ಪರವಾಗಿ ಒಟ್ಟು ಮೊಕ್ತಿಯಾರ ಎಂದು ಇದ್ದೆ ಎಂದರೆ ಸರಿ. ಮೂಲದಾವೆಯಲ್ಲಿಯೂ ಕೂಡ ನಾನು ನನ್ನ ತಾಯಿಯ ಪರವಾಗಿ ಒಟ್ಟು ಮೊಕ್ತಿಯಾರ ಎಂದು ಇದ್ದೆ ಎಂದರೆ ಸರಿ. ಮೂಲದಾವೆಯನ್ನು ನಡೆಸಲು ಶ್ರೀ ಎಸ್.ಆರ್. ನೆಲವಿಗಿ ವಕೀಲರನ್ನು ನಿಯೋಜಿಸಿಕೊಂಡಿದ್ದೇವು ಎಂದರೆ ಸರಿ. ಶ್ರೀ ಪಿ.ಎಂ.ಬೆನ್ನೂರ

ವಕೀಲರು ಶ್ರೀ ಎಸ್.ಆರ್. ನೆಲವಿಗಿ ವಕೀಲರ ಸಹಾಯಕ ನ್ಯಾಯವಾಧಿಗಳು ಎಂದರೆ ಸರಿ. ನಾನು ಒಟ್ಟು ಮೊಕ್ತಿಯಾರನಿದ್ದಾಗ ನನ್ನ ಪರವಾಗಿ ಶ್ರೀ ಪಿ.ಎಂ.ಬೆನ್ನೂರ ವಕೀಲರನ್ನು ನಿಯೋಜಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಇದೇ ಪ್ರಕರಣದಲ್ಲಿ ಮೊದಲು ಶ್ರೀ ಪಿ.ಎಂ.ಬೆನ್ನೂರ ವಕೀಲರನ್ನು ಸ್ವತಂತ್ರ್ಯವಾಗಿ ನಿಯೋಜಿಸಿಕೊಂಡಿದ್ದೆ ಎಂದರೆ ಶ್ರೀ ಎಸ್.ಆರ್. ನೆಲವಗಿ ಇವರು ಮರಣ ಹೊಂದಿದ ನಂತರ ಶ್ರೀ ಪಿ.ಎಂ.ಬೆನ್ನೂರ ವಕೀಲರಿಗೆ ನಿಯೋಜಿಸಿಕೊಂಡಿದ್ದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಈ ದರಖಾಸ್ತ ಅರ್ಜಿಯನ್ನು ಶ್ರೀ ಪಿ.ಎಂ.ಬೆನ್ನೂರ ವಕೀಲರೇ ದಾಖಲಿಸಿದ್ದಾರೆ ಎಂದರೆ ನನಗೆ ನೆನಪಿಲ್ಲ.

ನನ್ನ ತಾಯಿ ಬರೆದುಕೊಟ್ಟಿದ್ದಾರೆ ಎನ್ನಲಾದ ಮೃತ್ಯುಪತ್ರವನ್ನು ಯಾರು ಬರೆದುಕೊಟ್ಟಿದ್ದಾರೆ ಎಂದು ನಾನು ಇಲ್ಲಿಯವರೆಗೆ ನೋಡಿಲ್ಲ. ಸದರಿ ಮೃತ್ಯುಪತ್ರವನ್ನು ಶ್ರೀ ಪಿ.ಎಂ.ಬೆನ್ನೂರ ವಕೀಲರು ಬರೆದಿದ್ದಾರೆ ಎಂದು ನಂತರ ಗೊತ್ತಾಯಿತು. ನನ್ನ ತಾಯಿ ವಿದ್ಯಾಭ್ಯಾಸ ಮಾಡಿದ್ದರು ಆದರೆ ಕಣ್ಣಿನ ದೃಷ್ಟಿ ಸರಿಯಾಗಿ ಇರಲಿಲ್ಲ ಹಾಗಾಗಿ ಅವರು ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು. ನನ್ನ ತಾಯಿಗೆ ಕಾನೂನು ಜ್ಞಾನ ಇರಲಿಲ್ಲ ಎಂದರೆ ಕೇಳಿ ತಿಳಿದುಕೊಂಡಿದ್ದರು ಎಂದು ಸಾಕ್ಷಿ ಉತ್ತರಿಸುತ್ತಾರೆ. ನನ್ನ ತಾಯಿಗೆ ಪಾಶ್ವವಾಯುವಾಗಿ ಎಷ್ಟು ವರ್ಷ ಆಗಿತ್ತು ಎಂದು ನೆನಪಿಲ್ಲ. ನನ್ನ ತಾಯಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿತ್ತು ಅವರು ಕಣ್ಣಿನ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು. ನನ್ನ ತಾಯಿ ಮೂಲದಾವೆಯಲ್ಲಿನ ವಾದಪತ್ರಕ್ಕೆ ಮತ್ತು ಇತರೆ ದಾಖಲೆಗಳಿಗೆ ಸಹಿ ಮಾಡಿದ್ದಾಳೆ ಎಂದರೆ ಸರಿಯಲ್ಲ ನನ್ನ ತಾಯಿಗೆ 2009 ನೇ ಇಸವಿಯಲ್ಲಿ ಪಾಶ್ವವಾಯು ಆಗಿತ್ತು ಎಂದರೆ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಅದು ಕೇವಲ ಮೂರು ತಿಂಗಳಲ್ಲಿ ಗುಣಮುಖವಾಗಿರುತ್ತದೆ. ನನ್ನ ತಾಯಿಗೆ ದೇಹದ ಒಂದು ಭಾಗ ಸಂಪೂರ್ಣ ಪಾಶ್ವವಾಯು ಪೀಡಿತವಾಗಿ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ನಾನು ನನ್ನ ತಾಯಿಯನ್ನು ಆಸ್ಪತ್ರೆಗೆ ತೋರಿಸಿಲ್ಲ. ಕಣ್ಣಿನ ಶಸ್ತ್ರ ಚಿಕಿತ್ತೆಯನ್ನು ನಾನು ಮಾಡಿಸಿದ್ದೇನೆ ಉಳಿದ ಚಿಕಿತ್ಸೆಯನ್ನು ರವಿ ಇವರು ಮಾಡಿಸಿದ್ದಾರೆ. 2010 ರಲ್ಲಿ ನಾನು ದಾವಣಗೆರೆಯಲ್ಲಿ ಇದ್ದೆ. ನಾನು ಎಂದೂ ನನ್ನ ತಾಯಿಯನ್ನು ನೋಡಿಕೊಂಡಿಲ್ಲ ಆದ್ದರಿಂದ ನನ್ನ ಮತ್ತು ನನ್ನ ತಾಯಿಯ ನಡುವೆ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ

ತಾಯಿಯಿಂದ ಒಟ್ಟು ಮೊಕ್ತಿಯಾರ ಪತ್ರವನ್ನುಪಡೆದುಕೊಂಡಿದ್ದರ ದುರುಪಯೋಗ ಪಡಿಸಿಕೊಂಡು ದಾವೆಯನ್ನು ಸಲ್ಲಿಸಿದ್ದೆ ಹಾಗೂ ಈ ದರಖಾಸ್ತ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2010ರಲ್ಲಿ ನನ್ನ ತಾಯಿಗೆ ಪಾಶ್ವವಾಯು ಆಗಿದ್ದರಿಂದ ಅವರಿಗೆ ಓಡಾಡಲು ಮತ್ತು ಯಾವುದೇ ಯೋಚನೆ ಮಾಡಲು ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಬೇರೆಯವರ ಮೇಲೆ ಅವಲಂಬಿತಳಾಗಿದ್ದಳು ಎಂದರೆ ಸರಿಯಲ್ಲ. ನಾನು ನನ್ನ ತಾಯಿಗೆ ತಿಳಿಯದಂತೆ ಖೊಟ್ಟಿ ಮೃತ್ಯುಪತ್ರವನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ ನನ್ನ ತಾಯಿ ಎಂದಿಗೂ ಕೂಡ ನನ್ನ ಪರವಾಗಿ ಮೃತ್ಯುಪತ್ರವನ್ನು ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಅಶೋಕ ಇವರ ಹೆಂಡತಿ ಮಕ್ಕಳಿಗೆ ಅಂದರೆ ಈ ಪ್ರಕರಣದ ಎದುರುಗಾರರಿಗೆ ಆಸ್ತಿ ಕೊಡಬಾರದು ಎಂಬ ಉದ್ದೇಶ ನನಗೆ ಮೊದಲಿನಿಂದಲೂ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ ಈ ಪ್ರಕರಣ ಮುಂದುವರೆಸುವ ಇಚ್ಚೆ ಇರಲಿಲ್ಲ, ಅವಳು ತನ್ನ ಸೊಸೆಯೊಂದಿಗೆ ಚೆನ್ನಾಗಿ ಇದ್ದಳು ಆದರೂ ಕೂಡ ನಾನೇ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.ನನ್ನ ತಾಯಿಗೆ ಅಶೋಕ ಇವರ ಮಗ ಅಂದರೆ 2 ನೇ ಎದುರುಗಾರರ ಮೇಲೆ ಹೆಚ್ಚಿನ ಪ್ರೀತಿ ಇತ್ತು ಎಂದರೆ ಸರಿ. ಉಳಿದ ಯಾರಿಗೂ ಆಸ್ತಿ ಹೋಗಬಾರದು ನಾನೇ ಆಸ್ತಿಯನ್ನು ಎತ್ತಿಹಾಕಬೇಕು ಎನ್ನುವ ಉದ್ದೇಶದಿಂದ ಸುಳ್ಳು ಮೃತ್ಯುಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ ಶಿವಯೋಗಯ್ಯ ಕಲ್ಯಾಣಮಠ ಹಾಗೂ ಜೆ.ಎನ್. ಪಟೇಲ್ ಇವರು ನನಗೆ ಆತ್ಮೀಯರು ಎಂದರೆ ಸರಿಯಲ್ಲ. ಇವರೆಲ್ಲರೂ ನನಗೆ ಮೊದಲಿನಿಂದಲೂ ಮಿತ್ರರು ಆದ್ದರಿಂದ ಉದ್ದೇಶಪೂರ್ವಕವಾಗಿ ಅವರನ್ನು ಮೃತ್ಯುಪತ್ರಕ್ಕೆ ಸಾಕ್ಷಿದಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾವು, ಶ್ರೀ ಪಿ.ಎಂ.ಬೆನ್ನೂರ ವಕೀಲರು ಹಾಗೂ ಸಾಕ್ಷಿದಾರರು ಒಬ್ಬರಿಗೂಬ್ಬರು ಶಾಮೀಲಾಗಿ ಬಸವ್ವ ಇವರಿಗೆ ಗೊತ್ತಾಗದಂತೆ ಸುಳ್ಳು ಮೃತ್ಯುಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ ಬಸವ್ವ ಇವರಿಗೆ ಮೃತ್ಯುಪತ್ರದಲ್ಲಿ ಏನು ಬರೆಯಲಾಗಿತ್ತು ಎಂದು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಬಸವ್ವ ಇವರು ನನ್ನ ಪರವಾಗಿ ಮೃತ್ಯುಪತ್ರವನ್ನು ಮಾಡಿಕೊಟ್ಟಿಲ್ಲ ಆದ್ದರಿಂದ ಆಸ್ತಿಯಲ್ಲಿನನಗೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.
ಹಾವೇರಿ.